ಓ.ಎಸ್. ನಂಬರಃ 80/2021

ಡಿ. ಡಬ್ಲ್ಯೂಃ 2

(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು, ತಾಃ 07-02-2026)

ಮುಖ್ಯ ವಿಚಾರಣೆಃ 1 ರಿಂದ 5, 7 ರಿಂದ 9ನೇ ಪ್ರತಿವಾದಿಗಳ ಪರ ಶ್ರೀ ವಿ.ಎಫ್.ಜಿ. ವಕೀಲರಿಂದ,

ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ದಾಖಲಿಸಿದ್ದು ಅದನ್ನು ನಾನು ಓದಿ ನೋಡಿ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದ ಎಲ್ಲಾ ವಿಷಯಗಳು ನಿಜ ಇರುತ್ತವೆ.

ಪಾಟೀ ಸವಾಲುಃ ವಾದಿ ಪರ ಶ್ರೀ ಎನ್.ಎಸ್.ಆರ್.ಬಿ. ವಕೀಲರಿಂದ,

2. ನನಗೆ ಮಂಜುನಾಥ ಜಟ್ಟ ನಾಯ್ಕ (3ನೇ ಪ್ರತಿವಾದಿ)ಯ ವಕೀಲರು ಈ ದಿನ ಸಾಕ್ಷಿ ಹೇಳಲು ಕರೆದಿರುತ್ತಾರೆ. ಆ ರೀತಿ ನನಗೆ ಒಂದು ತಿಂಗಳ ಹಿಂದೆ ಹೇಳಿರುತ್ತಾರೆ. ಮಂಜುನಾಥ ಜಟ್ಟ ನಾಯ್ಕ (3ನೇ ಪ್ರತಿವಾದಿ) ರವರು ಕೇಸು ದಾಖಲಿಸಿರುವುದಿಲ್ಲ. ಮಂಜುನಾಥ ಜಟ್ಟ ನಾಯ್ಕ (3ನೇ ಪ್ರತಿವಾದಿ) ಮತ್ತು ಅವರ ಅಣ್ಣ-ತಮ್ಮಂದಿರ ವಿರುದ್ಧ ಮತ್ತು ಕರಿಯಪ್ಪ ಲಚ್ಮಯ್ಯ ನಾಯ್ಕ ರವರ ವಿರುದ್ಧ ಕೇಸು ದಾಖಲಿಸಿರುತ್ತಾರೆ. ಈ ದಾವೆಯನ್ನು ಸಾಹೇಬರೊಬ್ಬರು ದಾಖಲಿಸಿರುತ್ತಾರೆ. ಅವರು ಯಾರು ಎಂದು ನನಗೆ ಗೊತ್ತಿಲ್ಲ. ಈ ದಾವೆಯನ್ನು 01-35-00 ಜಾಗಕ್ಕೆ ದಾಖಲಿಸಿರುತ್ತಾರೆ. ಅದು ಸರ್ವೆ ನಂ. 76/1 ರಲ್ಲಿ 00-05-00, ಸರ್ವೆ ನಂ. 76/2 ರಲ್ಲಿ 00-20-00, ಸರ್ವೆ ನಂ. 76/3 ರಲ್ಲಿ 01-10-00 ಜಾಗ ಆಗಿರುತ್ತದೆ. ಸ್ವದ್ರಿ ಜಾಗದಿಂದ ನನ್ನ ಮನೆ ಸುಮಾರು ಅರ್ಧ, ಮುಕ್ಕಾಲು ಕಿ.ಮೀ. ದೂರದಲ್ಲಿ ಇರುತ್ತದೆ. ಈ ಮೇಲೆ ಹೇಳಿದ ಸರ್ವೆ ನಂ. ನ ಜಾಗದ ಪಶ್ಚಿಮ ದಿಕ್ಕಿನ ಪ್ರತಿವಾದಿಗೆ ಸೇರಿದ ಬೇರೆ ಜಮೀನುಗಳು ತುಂಬಾ ಇರುತ್ತವೆ. ಸ್ವದ್ರಿ ಎಲ್ಲಾ ಜಮೀನುಗಳ ಸರ್ವೆ ನಂ. ಗೊತ್ತಿಲ್ಲ, ಅದರಲ್ಲಿ ಕೆಲವು ಸರ್ವೆ ನಂ. ಮಾತ್ರ ಗೊತ್ತಿರುತ್ತದೆ. ಅದು ಸರ್ವೆ ನಂ. 70 ಮತ್ತು ಸರ್ವೆ ನಂ. 73/2 ಆಗಿರುತ್ತದೆ. ಸರ್ವೆ ನಂ. 70 ರಾಮಚಂದ್ರ ಜಟ್ಟ ನಾಯ್ಕ ರವರ ಹೆಸರಿನಲ್ಲಿರುತ್ತದೆ. ಸರ್ವೆ ನಂ. 73/2 ಕರಿಯಪ್ಪ ಲಚ್ಮಯ್ಯ ನಾಯ್ಕ ಮತ್ತು ಮಂಜುನಾಥ ಜಟ್ಟ ನಾಯ್ಕ (3ನೇ ಪ್ರತಿವಾದಿ) ರವರ ಹೆಸರಿನಲ್ಲಿರುತ್ತದೆ. ಸ್ವದ್ರಿ ಮೇಲೆ ಹೇಳಿದ ಎಲ್ಲಾ ಸರ್ವೆ ನಂಬರ್ ಗಳ ಪಹಣಿ ಪತ್ರಿಕೆಯನ್ನು ನೋಡಿರುತ್ತೇನೆ. ಹಾಗೆ ನನ್ನ ಗದ್ದೆ ಸ್ವದ್ರಿ ಸರ್ವೆ ನಂಬರ್ ಗಳ ಜಾಗದ ಪಕ್ಕದಲ್ಲಿರುತ್ತದೆ.

3. ನನ್ನ ಜಾಗದ ಸರ್ವೆ ನಂ. 73ಬ2 ಇದ್ದು, ಅದರಲ್ಲಿ 00-04-04 ಜಾಗ ಇರುತ್ತದೆ. ನನ್ನ ಮನೆ ಇರುವ ಜಾಗದ ಸರ್ವೆ ನಂ. 62 ಆಗಿರುತ್ತದೆ. ಸರ್ವೆ ನಂ. 76/1 ರಲ್ಲಿ 00-05-00, ಸರ್ವೆ ನಂ. 76/2 ರಲ್ಲಿ 00-20-00, ಸರ್ವೆ ನಂ. 76/3 ರಲ್ಲಿ 01-10-00 ಜಾಗವು ಒಂದೇ ಕಂಪೌಂಡ್ ನಲ್ಲಿ ಇರುತ್ತದೆ. ಈ ಜಾಗವನ್ನು ಹೊರತುಪಡಿಸಿ, ಪ್ರತಿವಾದಿಗಳಿಗೆ ಇರುವ ಬೇರೆ ಜಾಗವು ಈ ಮೇಲೆ ಹೇಳಿದ ಜಾಗದ ಕಂಪೌಂಡ್ ನ ಹೊರಗಡೆ ಪಶ್ಚಿಮ ದಿಕ್ಕಿನಲ್ಲಿ ಇರುತ್ತದೆ. ದಾವಾ ಆಸ್ತಿಗಳ ಸುತ್ತಲೂ ಇರುವ ಕಂಪೌಂಡ್ ತುಂಡು ಕಲ್ಲು ಮತ್ತು ಮಣ್ಣಿನಿಂದ ಮಾಡಿದ ಕಂಪೌಂಡ್ ಆಗಿರುತ್ತದೆ. ಈ ಮೇಲೆ ಹೇಳಿದಂತೆ ದಾವಾ ಆಸ್ತಿಗಳ ಕಂಪೌಂಡ್ ನ ಪಶ್ಚಿಮ ದಿಕ್ಕಿನಲ್ಲಿರುವ ಪ್ರತಿವಾದಿಗಳ ಕೆಲವೊಂದು ಆಸ್ತಿಗೆ ಕಂಪೌಂಡ್ ಹಾಕಿರುತ್ತದೆ, ಅದು ಯಾರು ಹಾಕಿದ್ದಾರೆಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಅನೇಕ ಜಾತಿಯ ಮರಗಳು ಇರುತ್ತವೆ ಎಂದರೆ,

ಸಾಕ್ಷಿಯು ಇಲ್ಲ, ಕೇವಲ ಒಂದು ಹಾಲೆ ಮರ ಮಾತ್ರ ಇರುತ್ತದೆ. ದಾವಾ ಆಸ್ತಿಯಲ್ಲಿ ಅನೇಕ ಕಾಡು ಜಾತಿಯ ಮರಗಳಿರುತ್ತವೆ ಎಂದರೆ ಸರಿಯಲ್ಲ. ಅಕೇಶಿಯಾ ಮರದ ಸಣ್ಣ ಸಣ್ಣ ಸಸಿಗಳು ಇರುತ್ತವೆ. ಈ ದಾವೆಯಲ್ಲಿ ಪ್ರತಿವಾದಿಗಳು ದಾವಾ ಆಸ್ತಿಗಳು ಅವರಿಗೆ ಕಬ್ಜಾ ಕೊಡಬೇಕೆಂದು ಸಾಧಿಸುತ್ತಿದ್ದಾರಾ ಎಂದರೆ, ಸಾಕ್ಷಿಯು ಇರಬಹುದು, ಆದರೆ ದಾವಾ ಆಸ್ತಿಗಳು ಪ್ರತಿವಾದಿಗಳ ಸ್ವಂತ ಆಸ್ತಿಯಾಗಿರುತ್ತದೆ. ನಾನು ಹೇಳುವಂತೆ ದಾವಾ ಆಸ್ತಿಗಳು ಪ್ರತಿವಾದಿಗಳ ಸ್ವಂತ ಆಸ್ತಿ ಎಂದು ಹೇಳಲು ದಾಖಲಾತಿ ನೋಡಿದ್ದೀರಾ ಎಂದರೆ, ಸಾಕ್ಷಿಯು ಹೌದು ಎಂದು ಉತ್ತರಿಸಿರುತ್ತಾರೆ. ಹಾಗಾದರೆ ಆ ದಾಖಲೆ ಯಾವುದು ಎಂಬ ಪ್ರಶ್ನೆಗೆ ಸಾಕ್ಷಿಯು ದಾಖಲೆ ಯಾವುದು ಎಂದು ನನಗೆ ಗೊತ್ತಿಲ್ಲ, ನನಗೆ ಓದಲು ಬರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಹಾಗಾದರೆ ದಾವಾ ಆಸ್ತಿಗಳ ಸರ್ವೆ ನಂ. ಗಳನ್ನು ಯಾವ ದಾಖಲಾತಿ ನೋಡಿ ಹೇಳುತ್ತಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ದಾಖಲಾತಿ ನೋಡಿರುವುದಿಲ್ಲ, ನನ್ನ ಜಾಗ ದಾವಾ ಆಸ್ತಿಗಳ ಪಕ್ಕದಲ್ಲಿ ಇರುವುದರಿಂದ ಹೇಳುತ್ತಿದ್ದೇನೆ ಎಂದು ಉತ್ತರಿಸಿರುತ್ತಾರೆ. ದಾವಾ ಆಸ್ತಿಗಳ ಸರ್ವೆ ನಕ್ಷೆಗಳನ್ನು ನೋಡಿರುವುದಿಲ್ಲ. ನನ್ನ ಜಾಗ ದಾವಾ ಆಸ್ತಿಗಳಿಂದ 3-4 ಗದ್ದೆ ಬಿಟ್ಟು ನಂತರ ಇರುತ್ತದೆ. ದಾವಾ ಆಸ್ತಿಗಳು ಬೆಟ್ಟು ಜಾಗ (Dry land) ಆಗಿರುತ್ತದೆ ಎಂದರೆ ಹೌದು. ದಾವಾ ಆಸ್ತಿಗಳಲ್ಲಿ ಭತ್ತ ಬೆಳೆಯಲು ಸಾಧ್ಯವಿಲ್ಲ ಎಂದರೆ, ಸರಿಯಲ್ಲ ಭತ್ತ ಬೆಳೆದಿರುತ್ತಾರೆ.

4. ಪ್ರತಿವಾದಿಗಳು ಅವರ ಜಾಗದಲ್ಲಿ ಭತ್ತ ಬೆಳೆಯುತ್ತಿದ್ದರು ಎಂದರೆ, ಸಾಕ್ಷಿಯು ಪ್ರತಿವರ್ಷ ಭತ್ತದ ಬೆಳೆ ಮಾಡುತ್ತಿದ್ದರು, ಆದರೆ ಈ ವರ್ಷ ಭತ್ತ ಬೆಳೆದಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ದಾವಾ ಆಸ್ತಿಗಳಲ್ಲಿ ಕಳೆದ 5 ವರ್ಷಗಳಿಂದ ಭತ್ತದ ಬೆಳೆ ಬೆಳೆದಿರುವುದಿಲ್ಲ. ಯಾಕೆಂದರೆ, ಕಾಡು ಹಂದಿ ಮತ್ತು ನವಿಲುಗಳ ಕಾಟದಿಂದ ಭತ್ತ ಬೆಳೆದಿರುವುದಿಲ್ಲ. ದಾವಾ ಆಸ್ತಿಗಳ ಬಗ್ಗೆ ನನಗಿಂತ ಪ್ರತಿವಾದಿಗಳಿಗೆ ಹೆಚ್ಚು ಮಾಹಿತಿ ಇರುತ್ತದೆ ಎಂದರೆ ಹೌದು. 4. ನಾನು ಮತ್ತು ಪ್ರತಿವಾದಿಗಳು ಒಂದೇ ಜಾತಿಗೆ ಸೇರಿದವರು ಎಂದರೆ ಹೌದು. ಪ್ರತಿವಾದಿಗಳು ನನ್ನ ಸಂಬಂಧಿಕರಾಗಿರುವುದಿಲ್ಲ. ದಾವಾ ಆಸ್ತಿಗಳನ್ನು ಪ್ರತಿವಾದಿಗಳ ಹಿರಿಯರು ವಾದಿಗೆ ಕ್ರಯ ಮಾಡಿದ ನಂತರದಿಂದ ಯಾವತ್ತೂ ಪ್ರತಿವಾದಿಗಳು ದಾವಾ ಆಸ್ತಿಗಳನ್ನು ಅನುಭವಿಸಿಕೊಂಡು ಬಂದಿರುವುದಿಲ್ಲ ಎಂದರೆ ಸಾಕ್ಷಿಯು ಕ್ರಯದ ಬಗ್ಗೆ ನನಗೆ ಗೊತ್ತಿಲ್ಲ, ಆದರೆ ದಾವಾ ಆಸ್ತಿಗಳನ್ನು ಪ್ರತಿವಾದಿಗಳು ಅನುಭವಿಸಿಕೊಂಡು ಬಂದಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನಾನು ಪ್ರತಿವಾದಿಗಳ ಜಾತಿ ಮತ್ತು ಸಂಬಂಧಿಕನಾಗಿರುವುದರಿಂದ, ಪ್ರತಿವಾದಿಗಳು ದಾವಾ ಆಸ್ತಿಗಳ ಕಬ್ಜಾದಲ್ಲಿ ಇಲ್ಲದೇ ಇದ್ದರೂ ಸಹ, ಕಬ್ಜಾದಲ್ಲಿದ್ದಾರೆಂದು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದಂತೆ ದಾವಾ ಆಸ್ತಿಗಳಿಂದ 2-3 ಗದ್ದೆ ಕಳೆದು, ನನ್ನ ಆಸ್ತಿ ಇದೆ ಎಂದು ಸೃಷ್ಠಿ ಮಾಡಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ವಾದಿಯ ಸ್ವಾಧೀನದಲ್ಲೇ ಇರುತ್ತದೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಗಳ ಬಗ್ಗೆ ಯಾವುದೇ ವಿಷಯ ಗೊತ್ತಿಲ್ಲದೇ ಇದ್ದರೂ ಸಹ, ಪ್ರತಿವಾದಿಗಳ ಚಿತಾವಣೆಯ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ, ಭಟ್ಕಳ**